

ಸಾವಿರಾರು ಸಲ ತಲುಪಿ ನಿಂತು ಬಿಡುತ್ತಿತ್ತು. ಸರಿ ರಾತ್ರಿ ತಲುಪುವ ಹೊತ್ತಿಗೆ ಮನಸ್ಸನ್ನು ಅಲ್ಲಿಗೇ ನಿಲ್ಲಿಸಿ, ನಾಳೆ ಬೆಳಗ್ಗೆ ಪಾವಗಡದ ಪೇಟೆ ಬೀದಿಯಲ್ಲಿ ಮಾರಬೇಕಾದ ತರಕಾರಿಗಳ ತಲೆ ಬುಟ್ಟಿಯ ಕಡೆಗೊಮ್ಮೆ ದೃಷ್ಟಿ ಹರಿಸಿ, ಜೋಡಿಸಿಟ್ಟ ಮೂಲಂಗಿ, ಗೋರಿಕಾಯಿ, ದಂಟಿನ ಸೊಪ್ಪಿಗೆ ತನ್ನ ದೃಷ್ಟಿ ತಗುಲಿಸಿ ಜೊಂಪಿಗೆ ಜಾರುತ್ತಿದ್ದಳು.

ಪ್ರತಿದಿನ ಬೆಳಗ್ಗೆ ಎದ್ದು ಕತ್ತಲು ಬೆಳಕಿನ ಸಂದಿಯಲ್ಲಿ ಬುಟ್ಟಿ ಹೊತ್ತು ನಾಲ್ಕು ಮೈಲಿ ನಡೆಯುತ್ತಿದ್ದಳು. ಪಶ್ಚಿಮ ದಿಕ್ಕಿನಿಂದ ಪಟ್ಟಣಕ್ಕೆ ನಡೆಯುತ್ತಿದ್ದ ಮಂಗಳಮ್ಮ, ಪೂರ್ವದಲ್ಲಿ ಮೇಲೇಳುತ್ತಿದ್ದ ಸೂರ್ಯನ ಕೆಂಪಿಗೆ ಕಣ್ಣಾಗಿ ದಣಿವಿಲ್ಲದೆ ದಾರಿ ಸವೆಸುತ್ತಿದ್ದಳು. ಊರಿಗೆ ಹಿಂದಿರುಗುವ ಹೊತ್ತಿಗೆ ಸೂರ್ಯ ತನ್ನ ಎಳೆತನ ಕಳೆದುಕೊಂಡು ಬೆನ್ನಿಗೆ ಚುರುಕಿಕ್ಕುವ ಯಿಟ್ಟಿನೊತ್ತಿಗೆ ಮನೆ ಸೇರುತ್ತಿದ್ದಳು. ಹಿಂಗೆ ಇವಳ ಬದುಕು ಬೆಳಕಿನೊಂದಿಗೆ ಬೆಳೆಯುವ, ಮಧ್ಯಾಹ್ನ ಬುಟ್ಟಿ ಖಾಲಿ ಮಾಡುವ ರಾಟೆಯಂತಾಗಿತ್ತು. ಇಳಿಹೊತ್ತಿಗೆ ಮಗಳು, ತರಕಾರಿ ಬೆಳೆಯುವ ರೈತರೊಂದಿಗೆ ನಾಲ್ಕು ಮೆಲು ಮಾತಾಗಿ ನಾಲ್ಕು ವರ್ಷಗಳೇ ಕಳೆದಿದ್ದವು. ಉಳಿದಂತೆ ನಾಲಗೆ ಇಲ್ಲದ ನರಜೀವವೇ ಆಗಿದ್ದಳು.

ಇವಳು ಪೇಟೆಯಿಂದ ಹಿಂದಿರುಗುವಾಗೆಲ್ಲ ಟಿಫಿನ್ ಕ್ಯಾರಿಯರ್ ಹಿಡಿದು ದಾರಿಯಲ್ಲಿ ಎದುರಾಗುತ್ತಿದ್ದವನು ಕಾವಲಪ್ಪ. ಏನ್ ಕೆಲ್ಸ ಕಾವಲಪ್ಪ? ಎಂದು ದಾರಿಯಲ್ಲಿ ಯಾರಾದರೂ ಪ್ರಶ್ನಿಸಿದರೆ, ನನ್ನದು ಕೈಕಸುಬಪ್ಪ. ಗೋವಿಂದ ಶೆಟ್ಟರು ಕಂತ್ರಾಟು ಒಪ್ಪಿಕೊಂಡ ಮನೆಗೆ ಹೋಗಿ ಮರ ಕೆತ್ತೋದು ಎಂದು ತನ್ನ ಬಡಗಿ ಕಾಯಕವನ್ನು ಅರೆಕನ್ನಡ, ಅರೆ ತೆಲುಗಿನಲ್ಲಿ ಆತ್ಮತೃಪ್ತಿಯಿಂದ ಬಣ್ಣಿಸುತ್ತಿದ್ದನು. ಇದೇ ಜೀವನುಮ್ಮಸ್ಸಿನಿಂದಲೇ ಸದಾ ಮಂಗಳಮ್ಮನಿಗೆ ದಾರಿಯಲ್ಲಿ ಎದುರು ಆಗುತ್ತಿದ್ದನು ಕಾವಲಪ್ಪ. ಇವನು ದಾರಿಗೆ ದೃಷ್ಟಿ ನೆಟ್ಟು ನಗುನಗುತ್ತಾ ಮುಂದಕ್ಕೆ ಹೋದವನೇ ಹೊರತು, ಇಷ್ಟು ವರ್ಷಗಳಲ್ಲಿ ಒಮ್ಮೆಯೂ ಆಕೆಯನ್ನು ಮಾತನಾಡಿಸಿದವನಲ್ಲ. ಅಂದು ಮಂಗಳಮ್ಮ ಹತ್ತಿರಾದ ತಕ್ಷಣ ಗಕ್ಕನೆ ನಿಂತು, ಮಂಗ್ಳಮ್ಮ, ಮೊನ್ನೆ ನಮ್ಮ ಶೆಟ್ರು ಜೊತೆ ಹುಣಸೂರಿಗೆ ಹೋಗಿದ್ದೆ ಮರ ಕೊಳ್ಳಕ್ಕೆ. ಅಲ್ಲಿ ಲಮಾಣಿ ನಾಗ್ರಾಜ ಸಿಕ್ಕಿದ್ದ. ಅದೇಮ್ಮಾ.. ಮೇಸ್ಟ್ರು ಹೆಸರು ಕರೆದಾಗ ನೀನು ಎಸ್ ಸರ್ ಅಂತಿದ್ದೆಯಲ್ಲ, ಆಮೇಲೆದ್ದು ಎಸ್ss... ಸಾರ್ss ಅಂತಿದ್ನಲ್ಲ ರಾಗವಾಗಿ, ಅವ್ನು ಅಂದ.

ವಾರಿಗೆಯಲ್ಲಿ ಸಮವಯಸ್ಕನೂ, ವರಸೆಯಲ್ಲಿ ಸೋದರ ಸಂಬಂಧಿಯೂ ಆದ ಕಾವಲಪ್ಪ ಹೆಚ್ಚು ಮಾತನಾಡುವ ಮನುಷ್ಯನಾದರೂ, ಸ್ವಚ್ಛ ನಡವಳಿಕೆಯವನೆಂಬ ಬಿರುದನ್ನು ಮುಗಳೂರಿನ ಗಾಸಿಪ್ ಮ್ಯಾಗಜೀನ್ ಎಂದೇ ಹೆಸರಾಗಿದ್ದ ಸೀಮುನಿಚಾರ್‌ರ ಹರಕು ಬಾಯಿಂದಲೂ ಪಡೆದಿದ್ದ! ಕಾವಲಪ್ಪ ಕರೆದಾಗ ನಿಂತ ಮಂಗಳಮ್ಮ ಅವನಾಡಿದ ಮಾತುಗಳನ್ನು ಆಲಿಸಿದಳು. ಮನಸ್ಸಿನ ಅಲೆಗಳನ್ನು ನಿಗ್ರಹಿಸಿ ತಣ್ಣಗೆ ನಿಂತಿದ್ದಳು. ಅವನೇ ಮಾತು ಮುಂದುವರಿಸಿ, ನಾಗ್ರಾಜ ಎಲ್ಡು ಸಲ ನಿಂಗೆ, ನಿಂಗಡುಂಗೆ, ಮೈಸೂರು, ಬೆಂಗ್ಳೂರಲ್ಲಿ ಸಿಕ್ಕಿದ್ನಂತೆ. ಬೆಂಗ್ಳೂರಲ್ಲಿ ಸಿಕ್ಕಾಗ ಅರಿವು ಆರೋಗ್ಯ ಅಂತ ಪಾಂಪ್ಲೆಟ್ ಕೊಟ್ಟು, ದೊಡ್ಡಾಸ್ಪತ್ರೆ ಡಾಕ್ಟ್ರು ಅತ್ರ ಮಾತಾಡಿ ಕಳಿಸಿದ್ದನಂತೆ. ಈಗ ರಾಯಣ್ಣ ಎಂಗವ್ರೆ ಅಂದ. ನಾನು ಎಲ್ಲ ಕಥೆ ಬಿಡಿಸಿ ಹೇಳ್ದೆ. ಮರ ಕೊಳ್ಳೊ ಲೆಟರ್‌ಗೆ ಪರ್ಮಿಷನ್ ತಗಳಕೆ ಅವನಾಫೀಸಿಗೆ ಹೋಗಿದ್ವಿ. ಅವ್ನೆ ದೊಡ್ಡ ಕುರ್ಚಿ ಮೇಲೆ ರಾಜನಂಗೆ ಕುಂತು ಸೈನ್ಮಾಡಿ ಕೊಟ್ಟ. ಮಂಗಳಮ್ಮಗೆ ಏನಾದ್ರೂ ಸಹಾಯ ಬೇಕಿದ್ರೆ ಮಾಡಾನ; ಅಗತ್ಯ ಇದ್ರೆ ನಂಗೆ ಪತ್ರ ಬರೆಯಕ್ಕೆ ಹೇಳೂಂದ. ತಗೋ ಅವನ ಅಡ್ರೆಸ್ ಕಾರ್ಡು ಎಂದು ವಿಸಿಟಿಂಗ್ ಕಾರ್ಡೊಂದನ್ನು ಮಂಗಳಮ್ಮನ ಕೈಗಿಟ್ಟು ಮುಂದಾರಿಯಾದ.

ಹನುಮಂತರಾಯನ ಇಬ್ಬರು ಅಣ್ಣಂದಿರ ಕುಟುಂಬ ಸೇನೆಯು ಮಂಗಳಮ್ಮನನ್ನು ನೀರಾಕದೆ ಬೇಯಲು ಒಲೆಯ ಮೇಲಿಟ್ಟ ಅಕ್ಕಿಕಾಳಿನಂತೆ ಕರಕಲು ಮಾಡಿತ್ತು. ಬೆಳ್ಳಂಬೆಳಗ್ಗೆ, ಇಳಿಸಂಜೆಗಳಲ್ಲಿ ಕ್ಯಾಕರಿಸುವ, ಕೆಮ್ಮುವ, ಮೂದಲಿಸುವ ಆ ದಂಡಿನ ವರ್ತನೆ ಒಮ್ಮೊಮ್ಮೆ ತಾರಕಕ್ಕೆ ಏರುತ್ತಿತ್ತು. ಬಂದಾಗಲಾಯ್ತು ಕಾವಲಪ್ಪ ಆಕೆಗೆ ಮುಖ ಕೊಟ್ಟು ಎಂದೂ ಮಾತನಾಡಿಸಿದವನಲ್ಲ. ಕಣ್ಣಿಗೆ ಕಣ್ಣಿಟ್ಟು ನೋಡಿದವನಲ್ಲ. ಆದರೂ ತಾರಕ ಸಂದರ್ಭಗಳಲ್ಲಿ ಕಾವಲಪ್ಪ ಮಂಗಳಮ್ಮನ ಕರೆ ಇಲ್ಲದೆಯೂ ಕನಿಕರಗೊಂಡು ಆಕೆಯ ಗಂಡನ ಕುಟುಂಬಸ್ಥರ ಮೇಲೆ ಕೆಂಡಾಮಂಡಲ ಪ್ರೋಕ್ಷಣೆಯನ್ನು ಮಾಡಿಬಿಡುತ್ತಿದ್ದ. ಪೇಟೆ ಕೈಕಸುಬಿನ ಕಾವಲಪ್ಪನ ಮೇಲೆ ಪ್ರತಿ ರೇಗಿದರೆ ಕಷ್ಟಕ್ಕೆ ಸಿಗುತ್ತಿದ್ದ ಐದತ್ತು ರೂಪಾಯಿಯ ಸಹಾಯಕ್ಕೆ ಸಂಚಕಾರ ಬೀಳುತ್ತದೆಂದು ಬೆದರಿದ ಬೆಕ್ಕುಗಳಂತೆ ನಟಿಸಿ ಆ ದಂಡು ಬಚ್ಚಿಟ್ಟುಕೊಳ್ಳುತ್ತಿತ್ತು. ವಿಸಿಟಿಂಗ್ ಕಾರ್ಡನ್ನು ಹಿಂದು ಮುಂದು ತಿರುಗಿಸಿ ನೋಡಿ, ಬುಟ್ಟಿಗೆ ಹಾಕಿಕೊಂಡು ಮಂಗಳಮ್ಮನೂ ಮುಂದಾರಿಯಾದಳು.

ಮನೆಗೆ ಬಂದು ತಲೆಗೆ ಕೈಕೊಟ್ಟು ಮಲಗಿದ ಮಂಗಳಮ್ಮ ಎಂದಿನಂತೆ ಇರಲಿಲ್ಲ. ಕಣ್ಣಿಗೆ ಜೊಂಪು ಇಂಬಾದಂತೆ ಭಾಸವಾದರೂ, ಅವಳೊಳಗೆ ನೆನಪುಗಳ ನದಿಯೊಂದು ಧುಮ್ಮಿಕ್ಕುತ್ತಿತ್ತು. ಹತ್ತನೇ ಕ್ಲಾಸು ಫೇಲಾಗಿ ಅವನು ಮನೆ ಬಿಟ್ಟು ಓಡೋಗಿರಬೌದು. ಇವತ್ತು ಊರಿಗೆ ಕಾರಿನಾಗೆ ಬರಂಗೆ ಆಗವ್ನೆ. ಬೆಂಗ್ಳೂರಲ್ಲಿ ಮನೆ ಕಟ್ಟವ್ನೆ. ಅವ್ನೆ ಅಣ್ಣಂದಿರ ಜೊತೆ ಮನೆಗೆ ಬಂದು ಹೆಣ್ಣು ಕೇಳ್ತಾ ಅವ್ನೆ ಅಂದ್ರೆ ಪುಸಗಟ್ಟೆ ಪುನಗಲ್ಲ. ಒಂಬತ್ತನೆ ಕ್ಲಾಸು ಮುಗಿತಲ್ವಾ? ಹೆಣ್ಣುಮಕ್ಳ ಜೀವ್ನ ಇನ್ನೆಷ್ಟು ಓದಿದರೂ ಅಷ್ಟೆ. ಒಳ್ಳೆ ಗಂಡ ಸಿಗೋದು ಅಂದ್ರೆ ದೇವ್ರು ಕೊಟ್ಟ ವರ ಇದ್ದಂಗೆ. ಎಂದು ಈಕೆಯ ಅಪ್ಪ ಹೊರಡಿಸಿದ್ದ ಫರ್ಮಾನು ಫಲಿಸಿತ್ತು. ಊ್ಹೂಂ.. ಉಹ್ಞೂಂ ಆಯ್ಕೆಯೇ ಇಲ್ಲದ ಈಕೆಗೆ ಎರಡು ಮಕ್ಕಳೂ ಆದವು. ಮಗಳುಟ್ಟುವ ಹೊತ್ತಿಗೆ ಅವಳಪ್ಪನೂ ಕಾಲದ ಬಯಲಿನಲ್ಲಿ ಹಾವು ಕಚ್ಚಿ ಜೀರ್ಣವಾಗಿದ್ದ. ಎಲ್ಲಾ ಮುಗಿದು 38 ವಸಂತಗಳನ್ನು ಪೂರೈಸುವುದರೊಳಗೆ ಮುಗಳೂರ ನಾಡಹೆಂಚಿನ ಮನೆಯ ಕತ್ತಲ ಸಂದಿಗಳಲ್ಲಿ ಬೆಳಕಿನ ಕಿರಣಗಳನ್ನು ಹುಡುಕುತ್ತಾ ಮೂರ್ನಾಲ್ಕು ವರ್ಷಗಳನ್ನು ತಳ್ಳಿದ್ದಳು. ಹತ್ತನೇ ಕ್ಲಾಸನ್ನು ರ್‍ಯಾಂಕ್‌ನೊಂದಿಗೆ ಪಾಸ್ ಮಾಡಿದ್ದ ಮಗಳು, ತನ್ನಪ್ಪನ ಸೇವೆಗೆಂದು ಒಂದು ವರ್ಷ, ಮಂಗಳೂರಿಗೆ ಬಂದು ಮೂರು ವರ್ಷಗಳಷ್ಟು ದಿನ ಕಾಲೇಜು ಓದನ್ನು ಹಿಂದಕ್ಕೆ ತಳ್ಳಿದ್ದಳು. ಮಗಳ ಭವಿಷ್ಯದ ದಿಕ್ಕುಗಾಣದೆ ಮಂಗಳಮ್ಮ ವಾರದ ಹಿಂದಷ್ಟೇ ಅವಳನ್ನು ಸರಕಾರಿ

